ಅಸಲು ದಾವಾ.ನಂ.224/2022
ಪಿ ಡಬ್ಲ್ಯೂ-1

ದಿನಾಂಕಃ 28-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:

ನಾನು ಶಿಕ್ಷಣ ಕತಲಿತಿಲ್ಲ. ಮಾರಾಪೂರ ಗ್ರಾಮದ ಮಾಂಗ ಮನೆತನದ ನನಗೆ ಗೊತ್ತಿಲ್ಲ. ಯಲ್ಲಪ್ಪ ಮಾಂಗ ಇವರಿಗೆ ಒಟ್ಟು 3 ಜನ ಮಕ್ಕಳು, ಅವರೆಂದರೆ ಮುತ್ತಪ್ಪ, ಚಂದ್ರಪ್ಪ ಮತ್ತು ಬಾಳಪ್ಪ. ಸದರಿ ಮುತ್ತಪ್ಪ ಇವರು 2-3 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಮತ್ತು ಬಾಳಪ್ಪ 3-4 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿಯಲ್ಲಪ್ಪ ಮಾಂಗಇವರಿಗೆ ರಂಗವ್ವ ಮತ್ತು ಭಾಗವ್ವ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿ, ಸಾಕ್ಷಿ ಮುಂದಮರೆದು ಅವರಿಗೆ ಮೂರು ಜನ ಹೆಣ್ಣು ಮಕ್ಕಳು, ಅವರೆಂದರೆ ರಂಗವ್ವ, ಭಾಗವ್ವ ಮತ್ತು ತಂಗೆವ್ವ ಎಂದು ಹೇಳುತ್ತಾರೆ. ಸದರಿ ರಂಗವ್ವ, ಭಾಗವ್ವ ಮತ್ತು ತಂಗೆವ್ವ ಇವರನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ, ಏಕೆಂದರೆ ಆಸ್ತಿ ನಮ್ಮ ಮತ್ತು ಮುತ್ತಪ್ಪನ ಮಧ್ಯೆ ಮಾತ್ರ ವಿಭಾಗವಾಗಬೇಕು, ಕಾರಣ ಸೇರಿಸಿಲ್ಲ ಎಂದು ಹೇಳುತ್ತಾರೆ. ಸದರಿ ಯಲ್ಲಪ್ಪ ಮಾಂಗ ನನ್ನ ಅಜ್ಜ ಈರಪ್ಪನ ಸಹೋದರ. ನನ್ನ ಅಜ್ಜ ಒಟ್ಟು ಮೂರು ಸಹೋದರರು, ಅವರೆಂದರೆ ಯಲ್ಲಪ್ಪ, ಈರಪ್ಪ ಮತ್ತು ದಾನಪ್ಪ. ನನ್ನ ತಾಯಿ ನಾಗವ್ವ, ಈರಪ್ಪನ ಒಬ್ಬಳೆ ಮಗಳು. ನನ್ನ ತಾಯಿ ನಾಗವ್ವ ಇವರ ಮದುವೆ ಆಗಿಲ್ಲ, ಅವರು ದೇವದಾಸಿ ಇರುತ್ತಾರೆ. ನಾನು ಸದರಿ ನಾಗವ್ವಳ ಮಗಳು. ನಾನು ನಾಗವ್ವಳ ಮಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ನಾನು ಆ ಬಗ್ಗೆ ಪೋಟೋಗಳನ್ನು ಹಾಜರಪಡಿಸಿರುತ್ತೇನೆ. ನಾನು ನಾಗವ್ವಳ ಮಗಳು ಎಂದು ತೋರಿಸಲು ವಂಶಾವಳಿ ಮತ್ತು ವಾರಸಾ ಪತ್ರ ಹಾಜರಪಡಿಸಿಲ್ಲ. ಸದರಿ ದಾಖಲೆಗಳನ್ನು ಹಾಜರಾಪಡಿಸುತ್ತೇನೆ.

ಪ್ರಕರಣವನ್ನು ದಾಖಲು ಮಾಡಲು ವಕೀಲರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ದಾವಾ ಆಸ್ತಿ ಜಮೀನು ಸರ್ವೆ ನಂ.20/4 ಕ್ಷೇತ್ರ 1 ಎಕರೆ 1 ಗುಂಟೆ ಇರುತ್ತದೆ. ದಾವಾ ಆಸ್ತಿಯಲ್ಲಿ ಗೋವಿನ ಜೋಳ ಮತ್ತು ಮೇವು ಬೆಳೆದಿರುತ್ತಾರೆ. ದಾವಾ ಆಸ್ತಿಯ ಚಕಬಂದಿ ಹೇಳಲು ಬರುತ್ತದೆ, ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ರಸ್ತೆ, ದಕ್ಷಿಣಕ್ಕೆ ಸಪ್ತಸಾಗರ ಇವರ ಜಮೀನು ಮತ್ತು ಉತ್ತರಕ್ಕೆ ಗಸ್ತಿ ಇವರ ಜಮೀನು ಇರುತ್ತದೆ. ನನ್ನ ತಾಯಿ ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಮದುವೆ ಸುಮಾರು 50 ವರ್ಷಗಳ ಹಿಂದೆ ಆಗಿರುತ್ತದೆ. ನನ್ನನ್ನು ಮಾರಾಪೂರ ಗ್ರಾಮದ ಲಕ್ಷ್ಮಣ ಅಡೇಕರ ಇವರಿಗೆ ಮದುವೆ

ಮಾಡಿಕೊಟ್ಟಿರುತ್ತಾರೆ. ನಿಪಿ-3 ರ ಪ್ರಕಾರ ನಾನು ಮುತ್ತಪ್ಪನ ಮಗಳು ಎಂದು ಬರೆದಿರುತ್ತಾರೆ ಎಂದರೆ ಅದು ಸುಳ್ಳಾಗಿ ಬರೆಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-3 ರ ದಾಖಲೆಯನ್ನು ನಾನು ಗ್ರಾಮ ಲೆಕ್ಕಾಧಿಕಾರಿಯೊಂದಿಗೆ ಮಿಲಾಪೆಯಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೃತ ನಾಗವ್ವ ಇವರ ಮಗಳಲ್ಲ, ನನ್ನ ಮತ್ತು ನಾಗವ್ವಳ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಮಾಂಗ ಮನೆತನಕ್ಕೆ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರದೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಎಂದೂ ಕಬ್ಜಾ ವಹಿವಾಟು ಹೊಂದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.10.28 17:29:18 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ